ಮಾತು ಕೇಳಬೇಕು, ಅವನ ಸೈನ್ ಬೇಕು, ಕೇಳ್ಲಿಕ್ಕೆ ಬೇಜಾರಾಗ್ತದೆ', ಅಂತ ಉದಾಸೀನ ಮಾಡಿಬಿಟ್ರು. ಆಗಿಂದ ಅವಳಿಗೆ ತಲೆ ಬಿಂಗ್ರಿಯಾಗಿದೆ. ಅವ ನಿಮ್ಮ ಮಗ ಅಲ್ಲ, ಅವನನ್ನೇನು ಕೇಳುದು ಅಂತ ರಗಳೆ! ಅವಳು ಗೊತ್ತಲ್ಲ! ಮಹಾ ಸೂಟೆ!' ಎಂದು ಸುಮ್ಮನಾದಳು. ಇವನು ಮೌನವಾಗಿದ್ದನ್ನು ನೋಡಿ, "ದೇವರಾಣೆ ಮಗ, ನಾವು ಯಾವತ್ತೂ ನಿನ್ನ ಬೇರೆ ಅಂತ ನೋಡಿಲ್ಲ! ಈ ಮಕ್ಕಳ ಜಗಳದಲ್ಲಿ ನಾವು ಸಾಯಬೇಕು' ಎಂದು ಬಿಕ್ಕತೊಡಗಿದಳು. ಕೂಡಲೇ, 'ಏ, ಎಂತ ಮಮ್ಮೀ ಹೀಗೆಲ್ಲ ಮಕ್ಕಳ ಹಾಗೆ' ಎಂದು ಅವಳನ್ನು ಸಮಾಧಾನ ಮಾಡಿದನು.

ಮಮ್ಮಿಯನ್ನು ಕಳುಹಿಸಿ ಬಾಲ್ಕನಿಗೆ ಬಂದವನಿಗೆ ಎಡ್ವಿನಾಳ ಬಗ್ಗೆ ಪಾಪ ಎನಿಸಿತು. ನಾನು ಮದುವೆಯಾದರೆ ತನಗೆ ಕಷ್ಟವಾದೀತು ಎಂಬ ಯೋಚನೆ ಅವಳಲ್ಲಿ ಮೂಡಿ ಬಿಟ್ಟಿತೇ? ಎನಿಸಿ ಖೇದವಾಯಿತು. ನಿನ್ನೆಯವರೆಗೂ ಎರಡು ಹೆಜ್ಜೆಯಿಟ್ಟರೂ ಎಡವಿಕೊಂಡು ಬೀಳುವ ಮಗುವಾಗಿದ್ದವಳು ಏಕಾಏಕಿ ಬೆಳೆದು ಪಕ್ಕಾ ವ್ಯವಹಾರಸ್ಥೆಯಂತೆ ನಡೆದುಕೊಳ್ಳತೊಡಗಿದ್ದಾಳೆಂಬುದು ನಗು ತರಿಸಿತು, ಸಂಕಟವೂ ಆಯಿತು. ಎಳವೆಯುದ್ದಕ್ಕೂ ಬೆನ್ನಿಗಂಟಿಕೊಂಡೇ ಬೆಳೆದ ಕಂದ, ಯಾವ ಮಾಯದಲ್ಲಿ ದೊಡ್ಡ ಹೆಂಗಸಿನಂತೆ, ತಾನು, ತನ್ನ ಗಂಡ, ತನ್ನ ಜಗತ್ತು, ತನ್ನ ಮನೆ, ಸಂಸಾರ ಎಂದೆಲ್ಲ ಯೋಚಿಸಲು ಕಲಿತಳು? ಶಾಲೆಯಿಂದ ಹಿಂದಿರುಗುವಾಗ ಮಳೆ ಸುರಿದರೆ, ವ್ಯಾನಿಟೀ ಬ್ಯಾಗನ್ನು ಅಡ್ಡ ಹಿಡಿದು ಓಡುವ ಮಮ್ಮಿಯ ಹಿಂದೆ ಒಂದೇ ಕೊಡೆಯಡಿಯಲ್ಲಿ ಬೆದರಿದ ಬೆಕ್ಕಿನ ಮರಿಗಳಂತೆ ಒಬ್ಬರಿಗೊಬ್ಬರು ಅಂಟಿಕೊಂಡು ನಡೆಯುತ್ತಿದ್ದ ಅಂದಿನ ನಾವು ಎಲ್ಲಿ ಹೋದೆವು, ಎಂದೆಲ್ಲ ಯೋಚಿಸಿ ಖಿನ್ನನಾದ.

ಮೊದಲಿನಿಂದಲೂ ತಂಟೆಕೋರಿಯಾಗಿಯೇ ಇದ್ದು, ಎಲ್ಲವನ್ನೂ ಉದ್ಧಟ ವ್ಯಂಗ್ಯದಿಂದಲೇ ನೋಡುತ್ತಿದ್ದ ಎಡ್ವಿನಾಳಲ್ಲಿ ದುಷ್ಟತನವಿರಲಿಲ್ಲ. ಎಷ್ಟೇ ಕಿತ್ತಾಡಿಕೊಂಡರೂ ಕೊನೆಗೆ ಕೆಟ್ಟ ಜೋಕೊಂದನ್ನು ಒರಟೊರಟಾಗಿ ಹೇಳಿ ತನ್ನನ್ನು ನಗಿಸಿ ಎಲ್ಲ ತಿಳಿಯಾಗಿಸುತ್ತಿದ್ದವಳನ್ನು ಸಣ್ಣ ಮನಸ್ಸಿನ ಹೆಂಗಸಾಗಿ ಬದಲಾಯಿಸಿದ ಬದುಕಿನ ಕಷ್ಟವಾದರೂ ಎಂತಹುದ್ದಿರಬಹುದು?. ಮರುಕ್ಷಣವೇ, ಎಡ್ವಿನಾಳ ನಡವಳಿಕೆಗೂ, ತನ್ನ ಯೋಚನೆಗಳಿಗೂ ಹೆಚ್ಚಿನ ವ್ಯತ್ಯಾಸವೇನಿಲ್ಲ ಎನಿಸಿತು. ತನ್ನ ತಂಗಿ ಒಂದು ರೀತಿಯಲ್ಲಿ ತಾನು ತನ್ನದು ಎಂದು ಗುದ್ದಾಡುತ್ತಿದ್ದರೆ, ತಾನೂ ಮತ್ತೊಂದು ಬಗೆಯಲ್ಲಿ ಅದನ್ನೇ ಮಾಡುತ್ತಿದ್ದೇನಲ್ಲ? ತನ್ನ ಮನಸ್ಸಿನಲ್ಲಿರುವ ಸ್ವಂತ ತಾಯಿ, ನನ್ನ ಸುಮಿ, ನನ್ನ ಮದುವೆ, ಪ್ರಪಂಚ, ಎಂಬೆಲ್ಲ ಪದಪುಂಜಗಳಿಗೂ, ಎಡ್ವಿನಾಳ ನನ್ನ ಅಮ್ಮ, ಸ್ವಂತ ಅಪ್ಪ, ನನ್ನ ಮನೆ, ಎಂಬ ಶಬ್ದಗಳಿಗೂ ಸಾಮ್ಯವಿದೆ ಎನಿಸಿತು. ತಮ್ಮ ತಮ್ಮದೇ ಲೋಕದ ಅನ್ವೇಷಣೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವ ತಮ್ಮಿಬ್ಬರ ನಡುವಿನ ನಿರ್ವಾತದಂತಹ ಬಿಂದುವಿನಲ್ಲಿ ನಿಂತ ಮಮ್ಮಿ, ಮತ್ತು ಅವಳ ಆ ಅವಸ್ಥೆಯನ್ನು ಅಸಹಾಯಕನಾಗಿ ನೋಡುತ್ತಿರುವ ಅಪ್ಪನ ಚಿತ್ರ ಮನಸ್ಸಿನಲ್ಲಿ ಮೂಡಿತು.



ಬೆಳಗ್ಗೆ ಎದ್ದು ಎಡ್ವಿನಾಳನ್ನು ಹುಡುಕುತ್ತಾ ಅಡುಗೆ ಮನೆಗೆ ಹೋದಾಗ ಪ್ಲಂ ಕೇಕಿನ ಹುಳಿ ಮಿಶ್ರಿತ ಸಿಹಿ ಪರಿಮಳ ಬಂತು, ಬೆನ್ನಿಗೇ ಮೀನಿನ ಕಟುವಾದ ಘಮವೂ ಸೇರಿಕೊಂಡಿತು. ಯಾರೂ ಇಲ್ಲದಿದ್ದಾಗ ಫ್ರಿಜ್ಜಿನಿಂದ ಕೇಕು ಕದ್ದು ತಿನ್ನುವ ಎಡ್ವಿನಾಳ ಚಿತ್ರ ಕಣ್ಣೆದುರು ಮೂಡಿ ನಕ್ಕ. ಮೆಟ್ಟುಗತ್ತಿಯ ಮೇಲೆ ಅಮ್ಮನಂತೆಯೇ ಕುಳಿತು ಮಧ್ಯಾಹ್ನಕ್ಕೆ ಮೀನು ಸ್ವಚ್ಛ ಮಾಡುತ್ತಿದ್ದವಳ ಪಕ್ಕದಲ್ಲಿ ಸ್ಟೂಲೆಳೆದುಕೊಂದು ಕುಳಿತು, 'ಎಂತದೇ, ಪ್ಲಂ ಕೇಕ್ ಫ್ಲೇವರಿನ ಮೀನಾ' ಎಂದನು. ತಮಾಷೆ ಸಾಕೆನಿಸಿ 'ವಿಷಯ ನೇರ ಹೇಳಿದ್ರೆ ಆಗ್ತಿತ್ತಲ್ಲ ಮಾರಾಯ್ತಿ! ಯೋಚನೆ ಬೇಡ! ಅದೆಂತದೋ ಸೈನು ಮಾಡಬೇಕಂತಲ್ಲ? ಎಲ್ಲ ಮಾಡ್ವ ಆಯ್ತು!' ಎಂದು ಅವಳ ಹೆಗಲ ಮೇಲೆ ಕೈಯಿಟ್ಟನು. ಇಲ್ಲಿವರೆಗೆ ಅವನನ್ನೇ ದಿಟ್ಟಿಸಿ ನೋಡುತ್ತಿದವಳು ಕಣ್ಣು ಕೆಳಗಿಳಿಸಿ 'ಬಂಗುಡೆ ಸುಖ ಇಲ್ಲ! ಮೀನು ಆರಿಸ್ಲಿಕ್ಕೆ ಬರುದಿಲ್ಲ ನಿನಗೆ' ಎಂದು ಕೆಲಸ ಮುಂದುವರೆಸಿದಳು. ಎಂದಿನ ಉದ್ಧಟತನದ ವರಸೆಗೆ ಮರಳಿದಳಲ್ಲ ಸಧ್ಯ! ಎಂದುಕೊಂಡು ಹೊರಬಂದ.

ಮಮ್ಮಿಯನ್ನು ಹುಡುಕಿಕೊಂಡು ಅಂಗಳಕ್ಕೆ ಬಂದಾಗ, ಅವಳು ಕುಕ್ಕರುಗಾಲಿನಲ್ಲಿ ಕುಳಿತು ಸಂಪಿನ ಹತ್ತಿರದ ಗುಲಾಬಿ ಹೂವಿನ ಗಿಡಗಳ ರೆಂಬೆಗಳನ್ನು ಕತ್ತರಿಸುತ್ತಿದ್ದಳು. ನಾಲಿಗೆ ತುಸುವೇ ಮುಂಚಾಚಿ ಅತ್ಯಂತ ನಾಜೂಕಾಗಿ ಕತ್ತರಿಯಾಡಿಸುತ್ತಿದ್ದವಳು ಇವನನ್ನು ಕಂಡಿದ್ದೇ ಏನಾಯ್ತು ಎಂದು ಹುಬ್ಬೇರಿಸಿದಳು, ಎಲ್ಲ ಸರಿಯಾಗಿದೆ ಎಂದು ತಲೆಯಾಡಿಸಿದವ, ಮತ್ತೆ ಏನೋ ಹೊಳೆದವನಂತೆ 'ಅಪ್ಪನಿಗೆಂತ ನಾನಂದ್ರೆ ಭಯವ ಮಮ್ಮಿ! ಸೈಟಿನ ಬಗ್ಗೆ ಕೇಳಿಕ್ಕೆ?' ಎಂದು ಕೇಳಿದ. ಪ್ರಯಾಸಪಟ್ಟು ಮೇಲೆದ್ದು ಪಕ್ಕ ಬಂದು ಕುಳಿತು ಭಯ ಅಲ್ವಾ! ಪಾಪ ಪ್ರಜ್ಞೆ, ನಿನ್ನ ಪಾಲಿಗೆಂತ ಇರಿಸಿರುವ ಸೈಟಲ್ಲವಾ ಅದು, ಅದನ್ನೂ ಕೊಟ್ಟುಬಿಟ್ರೆ, ನಿನಗೆಂತ ಮಾಡಲಿಲ್ಲ ಅಂತ ಆಗ್ತದಲ್ಲ ಅಂತ ಅವರಿಗೆ!' ಎಂದಳು. ಮೌನವಾಗಿ ಕುಳಿತಿದ್ದವನ ಹೆಗಲಿನ ಮೇಲೆ ಮೆಲ್ಲ ತಟ್ಟಿ, 'ಮನಸ್ಸಿನಲ್ಲಿ ಪ್ರೀತಿ ಇರ್ತದೆ, ಆದರೆ ಸರಿಯಾಗಿ ಹೇಳ್ಲಿಕ್ಕೆ ಆಗಲ್ಲ ಅವರಿಗೆ..... ನೀ ಸ ಹಾಗೆಯೇ ಫಿಲೀ' ಎಂದು ಎದ್ದು ಒಳ ಹೋದಳು. ಸ್ವಲ್ಪ ಹೊತ್ತಿಗೆ ಕಾಫಿಯ ಮಂದ ಸುಗಂಧ ತೇಲಿಬಂತು.

ಮಧ್ಯಾಹ್ನ ಸುಮಿಯನ್ನು ಕಾಣಲು ಹೊರಟಾಗ ಮಮ್ಮಿ ಹೆಂಚು ದಿಟ್ಟಿಸುತ್ತಾ ದಿವಾನದ ಮೇಲೆ ಕಾಲು ಚಾಚಿ ಮಲಗಿ ರೇಡಿಯೋದಲ್ಲಿ ಆಪ್ ಕೀ ಫರ್ಮಾಯಿಶ್ ಕೇಳುತ್ತಿದ್ದಳು, ನೆಲದ ಮೇಲೆ ದೀವಾನಕ್ಕೊರಗಿ ಕುಳಿತಿದ್ದ ಅಪ್ಪ ಪುಟ್ಟದಾಗಿ ಮಡಚಿದ್ದ ಪತ್ರಿಕೆಯಲ್ಲಿ ಪದಬಂಧ ಬಿಡಿಸುತ್ತಿದ್ದರು. ಇದನ್ನು ನೋಡಿದವನಿಗೆ ಹಿಂದಿನ ಸಂಜೆ ಇವರಿಬ್ಬರ ಮತ್ತು ತಮ್ಮಿಬ್ಬರ ಬಗ್ಗೆ ಎನಿಸಿದ್ದನ್ನು ಸುಮಿಯೊಂದಿಗೆ ಹಂಚಿಕೊಳ್ಳುವ ಉಮೇದು ಹೆಚ್ಚಾಯಿತು.

ಸಿಮೆಟ್ರಿಯೆದುರು ಬಂದವನಿಗೆ, ಹೊಸೂರು ರಸ್ತೆಯ ಅತಿವೇಗದ ಕರ್ಕಶ ಜಗತ್ತಿನ ಪಕ್ಕದಲ್ಲೇ ಇಂಥಾ ಪರಿ ಮೌನ ಹೊದ್ದ ಜಾಗೆಯೊಂದಿದೆ ಎಂಬುದು ಮಜವೆನಿಸಿತು. ಒಳ ಹೋಗದೆ, ಮೂಲೆಯಲ್ಲಿ ಬಿದ್ದುಕೊಂಡಿದ್ದ ಮರದ ದಿಮ್ಮಿಯ ಮೇಲೆ ಕುಳಿತು ಸುಮಿಯುನ್ನು ಕಾಯುತ್ತಿದ್ದವ, ಏನೋ ಕಾಣಿಸಿದವನಂತೆ ಎದ್ದು ಸ್ಮಶಾನದೊಳಗೆ ನಡೆದ. ಗೋರಿಗಳ ಸಾಲುಗಳ ನಟ್ಟ ನಡುವಿನಲ್ಲಿದ್ದ ಟಬೂಬಿಯಾ ಮರದಲ್ಲಿ ಒಂದು ಹಸಿರೆಲೆಯೂ ಕಾಣಿಸದಷ್ಟು ಒತ್ತೊತ್ತಾಗಿ ತಿಳಿ ಗುಲಾಬಿ ಬಣ್ಣದ ಹೂವುಗಳರಳಿದ್ದವು. ಸ್ವಚ್ಛ ನೀಲಿ ಆಕಾಶ ಮತ್ತು ಮಧ್ಯಾಹ್ನದ ಬಿಸುಲಿಗೆ ಹೊಳೆಯುತ್ತಿದ್ದ ಹಸುರೆಲೆಗಳ ಹಿನ್ನೆಲೆಯಲ್ಲಿ ಅವು ಮತ್ತಷ್ಟು ಮುದ್ದಾಗಿ ಕಾಣಿಸುತ್ತಿದ್ದುವು. ಅಕ್ಕಪಕ್ಕ ತಿರುಗಿದಾಗ ಹಳದಿ, ನೇರಳೆ, ಬಿಳುಪಿನ ಹೂವುಗಳನ್ನು ಹೊದ್ದು ನಿಂತಿದ್ದ ಎತ್ತರದ ಮರಗಳೂ ಹೀಗೇ ಕಾಣಿಸಿದುವು, ಮುಗಿಲ ಮಲ್ಲಿಗೆ ಹೂವುಗಳ ಅಸ್ಪಷ್ಟ ನರುಗಂಪು ಎಲ್ಲೆಲ್ಲೂ ಇತ್ತು. ಇದೆಲ್ಲ ತನಗೆ ಮೊದಲು ಬಂದಾಗಲೇ ಏಕೆ ಕಾಣಲಿಲ್ಲವೆಂದುಕೊಂಡ ಕ್ಷಣಕ್ಕೆ ಫಿಲಿಪನಿಗೆ ತಾನು ನಿರಾಸೆ ಮತ್ತು ವಸಂತ ಎಂಬ ವಿರುದ್ಧ ಬಿಂದುಗಳ ನಡುವಿನ ಸಂದಿಗ್ಧ ಸ್ಥಳದಲ್ಲಿ ನಿಂತಂತೆ, ಅವುಗಳಲ್ಲಿ ತಾನು ಯಾವುದನ್ನು ಆರಿಸಿಕೊಳ್ಳುತ್ತೇನೆ ಎಂಬುದರ ಮೇಲೆ ತನ್ನ ಮುಂದಿನ ಬದುಕೂ ನಿಂತಿರುವಂತೆ ಭಾಸವಾಯಿತು. ಅವನ ಎಡಬದಿಯಲ್ಲಿದ್ದ ಗೋಡೆಯ ಉದ್ದಕ್ಕೂ ದಟ್ಟವಾಗಿ ಹರಡಿದ್ದ ಕಡುಹಸಿರು ಬಳ್ಳಿಯನ್ನು ತುಂಬಿಕೊಂಡಿದ್ದ ಗಾಢ ಕೇಸರಿ ಬಣ್ಣದ ಉದ್ದುದ್ದ ಹೂವುಗಳ ಮೇಲೆ ಬಿಸಿಲು ಬಿದ್ದು ಫಕ್ಕನೇ ನೋಡಿದವರಿಗೆ ಕಂಪೌಂಡಿನ ಬದಿಯಲ್ಲಿ ಬೆಂಕಿ ಉರಿಯುತ್ತಿದ್ದಂತೆ ಕಾಣುತ್ತಿತ್ತು. ಯಾವಾಗಲೋ ಬಂದು, ಕಂಪೌಂಡಿನ ಬಲ ಕೊನೆಯಲ್ಲಿದ್ದ ಗಸಗಸೆ ಹಣ್ಣಿನ ಗಿಡ್ಡ ಮರದ ನೆರಳಿನಲ್ಲಿ ನಿಂತಿದ್ದ ಸುಮೀ, 'ಏ ಫಿಲೀ, ಹಣ್ಣು ಕಿತ್ತು ಕೊಡು ಬಾರೋ' ಎಂದು ಕೂಗಿ ಕರೆದಳು. ಎತ್ತರೆತ್ತರದ ಮರಗಳು ಚೆಲ್ಲಿದ್ದ ನೆರಳನ್ನು ಸೀಳಿಕೊಂಡು ಬರುತ್ತಿದ್ದ ಬಿಸಿಲಿನಲ್ಲಿ ಸ್ನಾನ ಮಾಡುತ್ತಾ ಧೂಳು ಕವಿದ ಮಬ್ಬು ಹಸಿರು ಪಾಚಿಹೊದ್ದು ಮಲಗಿದ್ದ ಗೋರಿಗಳ ಸಾಲುಗಳನ್ನು ದಾಟಿಕೊಂಡು ಸುಮಿಯ ಬಳಿ ಹೋದ ಫಿಲಿಪ್, ಮರದ ಕೊಂಬೆಯೊಂದನ್ನು ಎಡಗೈಯಿಂದ ಕೆಳಗೆಳೆದು ಗುಲಾಲಿ ಬಣ್ಣದ ಪುಟ್ಟಪುಟ್ಟ ಮುದ್ದಾದ ಗಸಗಸೆ ಹಣ್ಣುಗಳನ್ನು ಕಿತ್ತು ಕಿತ್ತು ಅವಳು ಮುಂದೊಡ್ಡಿದ್ದ ಸಲ್ವಾರಿನ ಸೆರಗಿನ ತುಂಬ ಸುರಿಯತೊಡಗಿದ. ■